## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.52/2020**

| | | |
|---|---|---|
| ಸಾಕ್ಷಿದಾರರ ಹೆಸರು | ಅಣ್ಣಪ್ಪ | |
| ತಂದೆಯಹೆಸರು | ಗಣಪತಿ | ಡಿ .ಡಬ್ಲ್ಯೂ-2 |
| ವಯಸ್ಸು | 29 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಮೆಕಾನಿಕ್ | ದಿನಾಂಕಃ |
| ವಾಸಃ | ಕೆಳಗಿನಗೋಳುಗೋಡು, ಸಾಗರ | 04.05.2026 |

**ಮೌಖಿಕ ಮುಖ್ಯ ವಿಚಾರಣೆಃ ಆರೋಪಿತನ ವಕೀಲರಾದ ಶ್ರೀ ಎಂ.ಆರ್.ಎಸ್ ರವರಿಂದಃ**

1. 1 ನೇ ಆರೋಪಿತನು ನನಗೆ ಗೊತ್ತು. ಫಿರ್ಯಾದಿ ನನಗೆ ಗೊತ್ತು. ನನ್ನ ಮತ್ತು ಫಿರ್ಯಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ಸುಮಾರು 12-13 ವರ್ಷಗಳ ಹಿಂದೆ ಫಿರ್ಯಾದಿಯು ನನ್ನ ಬಳಿ ನಮ್ಮ ತೋಟದಲ್ಲಿ ಬೆಳೆದ ಬಾಳೇಹಣ್ಣು, ಪೈನಾಪಲ್ ಅನ್ನು ಖರೀದಿ ಮಾಡಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದನು. 1 ನೇ ಆರೋಪಿತನು ಮತ್ತು ಫಿರ್ಯಾದಿಯ ನಡುವೆ ಕಟ್ಟಡದ ವಿಷಯದಲ್ಲಿ ಮನಸ್ತಾಪ ಇತ್ತು. ಈ ಕೇಸಿನಲ್ಲಿ ಹಾಜರು ಪಡಿಸಿರುವ ಚೆಕ್ಕು ನನ್ನದು. ಅದರಲ್ಲಿನ ಸಹಿ ನನ್ನದಲ್ಲ. ಸದರಿ ಫಿರ್ಯಾದಿಯು ನನ್ನ ಮನೆಯಲ್ಲಿದ್ದ ಚೆಕ್ ಅನ್ನು ದಿನಾಂಕ 10.11.2019 ರಂದು ಅಕ್ರಮವಾಗಿ ತೆಗೆದುಕೊಂಡು ಹೋಗಿ ಅದರಲ್ಲಿ 1 ನೇ ಆರೋಪಿತನ ಹೆಸರು ಹಾಗೂ ಸಹಿಯನ್ನು ಮಾಡಿ ಬ್ಯಾಂಕಿಗೆ ಹಾಜರು ಪಡಿಸಿದ್ದಾನೆ. ಸದರಿ ಚೆಕ್ಕಿನಲ್ಲಿರುವ ಸಹಿ ಮತ್ತು ಇತರೆ ವಿವರಗಳನ್ನು ನಾನು ಬರೆದಿಲ್ಲ. ಚೆಕ್ ಬೌನ್ಸ್ ಆಗಿ ವಕೀಲರಿಂದ ನೋಟೀಸ್ ಬಂದ ನಂತರ ನನಗೆ ಈ ಕೇಸಿನ ಬಗ್ಗೆ ತಿಳಿದಿರುತ್ತದೆ. ಫಿರ್ಯಾದಿಯು ಆಪಾಧಿಸಿದಂತೆ ನಾನು ಯಾವುದೇ ಅಪರಾಧವನ್ನು ಮಾಡಿಲ್ಲ, ಫಿರ್ಯಾದಿಯಿಂದ ಹಣವನ್ನು ಸಾಲವಾಗಿ ಪಡೆದಿಲ್ಲ. ಫಿರ್ಯಾದಿಗೆ ಹಣವನ್ನು ಸಾಲವಾಗಿ ನೀಡುವಷ್ಟು ಆರ್ಥಿಕ ಸಾಮಾರ್ಥ್ಯ ಇಲ್ಲ. ಆದ್ದರಿಂದ ನನ್ನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಬೇಕಾಗಿ ಕೋರುತ್ತೇನೆ.

**ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.